# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ಆಯುಕ್ತರು(ಆಸ್ತಿಗಳು)ರವರ ಕಛೇರಿ, ಮಹಾನಗರ ಪಾಲಿಕೆ ಕಛೇರಿಗಳು, ಎನ್.ಆರ್.ವೃತ್ತ, ಬೆಂಗಳೂರು.

ಸಂಖ್ಯೆ:ಜಂ.ಆ(ಆಸ್ತಿಗಳು):ಜಿಎಲ್/ಪಿಆರ್/17/2014-15 ದಿನಾಂಕ:10-10-2014

ರವರಲ್ಲಿ,
ಶ್ರೀ. ಎಚ್.ಎಸ್.ದೊರೆಸ್ವಾಮಿ
ಭೂ ಕಬಳಿಕೆ ವಿರೋಧಿ ಹೋರಾಟ ಸಮಿತಿ,
ಬೆಂಗಳೂರು.

ಸನ್ಮಾನ್ಯರೆ,

ವಿಷಯ: ಶ್ರೀ.ಎ.ಟಿ.ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿ ವರದಿಗೆ ಬಿಬಿಎಂಪಿ ವ್ಯಾಪ್ತಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರದ ದಿನಾಂಕ:09-10-2014

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಉಲ್ಲೇಖದ ದಿನಾಂಕ:09-10-2014ರ ಪತ್ರದಲ್ಲಿ ಭೂ ಕಬಳಿಕೆ ವಿರೋಧಿ ಹೋರಾಟ ಸಮಿತಿಯ ವತಿಯಿಂದ ಈ ಕೆಳಕಂಡ ಮಾಹಿತಿಯನ್ನು ಶ್ರೀ.ಎ.ಟಿ.ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿ 2007 ರಲ್ಲಿ ಭೂ ಕಬಳಿಕೆಯ ಪ್ರಕರಣಕ್ಕೆ ಬಿಬಿಎಂಪಿ ವ್ಯಾಪ್ತಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕೋರಿರುವುದು ಸರಿಯಷ್ಟೆ.

..2

**ಕೆಳಕಂಡ ತಮ್ಮ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಉತ್ತರಗಳನ್ನು ಸಿದ್ದಪಡಿಸಿ/ ಅನುಪಾಲನಾ ವರದಿ/ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಅವಗಾಹನೆಗಾಗಿ ಮಂಡಿಸಿದೆ.**

| ಕ್ರ.ಸಂ | ಪ್ರಶ್ನೆಗಳು | ಉತ್ತರ | ಅನುಬಂಧ |
|---|---|---|---|
| 1 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿದ ಕೆರೆ, ರಾಜಕಾಲುವೆ, ಪಾರ್ಕ್, ಆಟದ ಮೈದಾನ, ಸಿ.ಎ.ನಿವೇಶನ, ರಸ್ತೆ ಮುಂತಾದ ಸ್ಥಳಗಳಿಗೆ ಅಕ್ರಮ ದಾಖಲೆ ಸೃಷ್ಟಿಸಿಕೊಂಡು ಕಬಳಿಸಿರುವ ವಿವರಗಳನ್ನು ಒದಗಿಸುವುದು. | ಜಂಟಿ ಸದನ ಸಮಿತಿಯ ವರದಿಯಂತೆ ಪಾಲಿಕೆಯಲ್ಲಿ – ಸಮಿತಿ ಗುರುತಿಸಿರುವ ಆಸ್ತಿಗೆ (7.02 ಎ–ಗು), ರಾಜಕಾಲುವೆ, ಕೆರೆಗಳಿಗೆ ಸಂಬಂಧಿಸಿದಂತೆ ಕ್ರಮವಿಟ್ಟಿದ್ದು, ಪ್ರಗತಿ ವರದಿಯನ್ನು ಸರ್ಕಾರದಲ್ಲಿ ಕಾಲ ಕಾಲಕ್ಕೆ ವರದಿಸುತ್ತಿದ್ದು, (Abstract) ಲಗತ್ತಿಸಿದೆ.<br><br>ರಾಜಕಾಲುವೆ ಮತ್ತು ಕೆರೆಗಳಿಗೆ ಸಂಬಂಧಿಸಿದಂತೆ ಸಂಪೂರ್ಣವಾದ ವಿವರವಾದ ವರದಿ.<br><br>ಪಾಲಿಕೆಯ ಆಸ್ತಿಗಳಿಗೆ ಸಂಬಂಧಿಸಿದಂತೆ – ಉದ್ಯಾನವನ, ಆಟದ ಮೈದಾನ ಮತ್ತು ಖಾಲಿ ಜಾಗಗಳಿಗೆ ಸಂಬಂಧಿಸಿದಂತೆ (1688 ಆಸ್ತಿಗಳಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ) ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಲಗತ್ತಿಸಿದೆ.<br><br>ಗುತ್ತಿಗೆ ಆಸ್ತಿಗಳಿಗೆ ಸಂಬಂಧಿಸಿದಂತೆ ಹಾಗೂ ಪಾಲಿಕೆಯ ಆಸ್ತಿಗಳಿಗೆ ಸಂಬಂಧಿಸಿದಂತೆ ಗೌರವಾನ್ವಿತ ನ್ಯಾಯಾಲಯದ ಆದೇಶ WP No:12249/2003 ಅಡಿ ಕ್ರಮವಿಡುತ್ತಿದ್ದು, ದಿನಾಂಕ:09-10-2014 ರಂದು ನ್ಯಾಯಾಲಯಕ್ಕೆ ಅನುಪಾಲನಾ ವರದಿಯನ್ನು ಸಲ್ಲಿಸಿದ್ದು, ಪ್ರತಿ ಲಗತ್ತಿಸಿದೆ. | ಅನುಬಂಧ-1<br><br>ಮುಖ್ಯ ಅಭಿಯಂತರರು ಮಳೆನೀರುಗಾಲುವೆ ಮತ್ತು ಕೆರೆಗಳ ವಿಭಾಗದವರಿಂದ ಪಡೆಯಬಹುದಾಗಿರುತ್ತದೆ.<br><br>ಅನುಬಂಧ-01<br><br>ಅನುಬಂಧ-02 |

| | | | |
|---|---|---|---|
| | | ಸಿ.ಎ. ನಿವೇಶನಗಳಿಗೆ ಸಂಬಂಧಿಸಿದಂತೆ ಪಾಲಿಕೆಗೆ ಹಸ್ತಾಂತರ ಆಗದೆ ಇರುವ ನಿವೇಶನಗಳ ಬಗ್ಗೆ<br><br>ಪಾಲಿಕೆಗೆ ಹಸ್ತಾಂತರವಾಗಿ ಪಟ್ಟಿಯಲ್ಲಿರುವ ಸಿ.ಎ. ನಿವೇಶನಗಳ ಬಗ್ಗೆ.<br><br>ರಸ್ತೆ, ಪಾದಚಾರಿ ಮಾರ್ಗ ಹಾಗೂ ಇತರೆ ಬಗ್ಗೆ. | ಬಿ.ಡಿ.ಎ ರವರಿಂದ ವರದಿಯನ್ನು ಪಡೆಯ ಬಹುದಾಗಿರುತ್ತದೆ.<br><br>ಪಾಲಿಕೆಯ 8 ವಲಯ ಅಧಿಕಾರಿಗಳಿಂದ ವರದಿಸಿಕೊಳ್ಳಬೇಕಿರುತ್ತದೆ<br><br>ಪ್ರಧಾನ ಅಭಿಯಂತರರು, ಮುಖ್ಯ ಅಭಿಯಂತರರು ಮೂಲಭೂತ ಸೌಕರ್ಯ ಹಾಗೂ 8 ವಲಯಾಧಿಕಾರಿಗಳಿಂದ ವರದಿಸಿಕೊಳ್ಳಬೇಕಿರುತ್ತದೆ. |
| 2 | ಆ ಪೈಕಿ ಎಷ್ಟು ಪ್ರಕರಣಗಳಲ್ಲಿ ಕಬಳಿಕೆಯಾಗಿದ್ದ ಭೂಮಿಯನ್ನು ಬಿಬಿಎಂಪಿಗೆ ವಾಪಸ್ ಪಡೆಯಲಾಗಿದೆ? ವಿವರಗಳನ್ನು ಒದಗಿಸುವುದು. | **ಗುತ್ತಿಗೆ ಆಸ್ತಿಗಳಿಗೆ ಸಂಬಂಧಿಸಿದಂತೆ** ದಿ:06-09-2014 ರಂದು ಪಾಲಿಕೆಯ ದಕ್ಷಿಣ ವಲಯದಲ್ಲಿ ವಿಲ್ಸನ್ ಗಾರ್ಡನ್, 2ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಸಹಾಯಕ ಕಂದಾಯ ಅಧಿಕಾರಿ ಹೊಂಬೇಗೌಡನಗರ ವ್ಯಾಪ್ತಿಯಲ್ಲಿನ 60*40 ರಲ್ಲಿದ್ದಂತಹ ಗುತ್ತಿಗೆ ನೀಡಿದ್ದ ಆಸ್ತಿಯನ್ನು (1978ಕ್ಕೆ ಗುತ್ತಿಗೆ ಅವಧಿ ಮುಗಿದಿರುತ್ತದೆ) ಪಾಲಿಕೆಯ ವಶಕ್ಕೆ ಪಡೆಯಲಾಗಿದ್ದು, ಸದರಿ ಆಸ್ತಿಯ ಮೌಲ್ಯ 3 ಕೋಟಿ ಆಗಿರುತ್ತದೆ. | ಲಭ್ಯವಿರುವ ಮಾಹಿತಿಯನ್ನು ಒದಗಿಸಲಾಗಿದ್ದು, ಸಂಪೂರ್ಣವಾದ ವರದಿಯನ್ನು ಎಲ್ಲಾ ವಲಯ ಅಧಿಕಾರಿಗಳಿಂದ ವರದಿಸಿಕೊಳ್ಳಬಹುದಾಗಿರುತ್ತದೆ. |

| | | | |
|---|---|---|---|
| | | **<u>ಪಾಲಿಕೆಯಲ್ಲಿ ಉದ್ಯಾನವನಗಳಿಗೆ ಸಂಬಂಧಿಸಿದಂತೆ, ಯಲಹಂಕ ವಲಯದಲ್ಲಿ</u>**<br><br>(ಎ) ಬಿಡಿಎ ಅನುಮೋದಿತ ಬಡಾವಣೆ ವಾರ್ಡ್ ನಂ 8 ವ್ಯಾಪ್ತಿಯ ಸರ್ವೆ ನಂ 18/2ರಲ್ಲಿ ಕೋತಿಹೊಸಹಳ್ಳಿ ಗ್ರಾಮದ 18 ಗುಂಟೆ ಉದ್ಯಾನವನದ ಜಾಗ ಒತ್ತುವರಿಯಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ WP.No:49087/13 ರಲ್ಲಿ ಪಾಲಿಕೆಯ ಪರ ತೀರ್ಪು ಬಂದಿದ್ದು, ಪಾಲಿಕೆ ವಶಕ್ಕೆ ಅಂದಾಜು ಮೌಲ್ಯ ರೂ.60 ಕೋಟಿ ಮೌಲ್ಯದ ಆಸ್ತಿಯನ್ನು ಪಡೆಯಲಾಗಿರುತ್ತದೆ.<br><br>(ಬಿ) ಬಿಡಿಎ ಅನುಮೋದಿತ ಬಡಾವಣೆ ವಾರ್ಡ್ ನಂ 8 ವ್ಯಾಪ್ತಿಯ ಸರ್ವೆ ನಂ 15/2ರಲ್ಲಿ ಕೋತಿಹೊಸಹಳ್ಳಿ ಗ್ರಾಮದ 7 ಎಕರೆ 2 ಗುಂಟೆ ಉದ್ಯಾನವನದ ಜಾಗದ ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದಂತೆ O.S. No:3380/11 ಮಾನ್ಯ ಘನ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು, ಚಾಲ್ತಿಯಲ್ಲಿರುತ್ತದೆ.<br><br>(ಸಿ) ಬಿಡಿಎ ಅನುಮೋದಿತ ಬಡಾವಣೆ ವಾರ್ಡ್ ನಂ 8 ವ್ಯಾಪ್ತಿಯ ಸರ್ವೆ ನಂ 14/1ರಲ್ಲಿ ಕೊಡಿಗೆಹಳ್ಳಿ ಗ್ರಾಮದ 1 ಎಕರೆ 10 ಗುಂಟೆ ಉದ್ಯಾನವನದ ಜಾಗ ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದಂತೆ O.S. No:583/09 ರಲ್ಲಿ ಪಾಲಿಕೆಯ ಪರ ತೀರ್ಪು ಬಂದಿದ್ದು, ಪಾಲಿಕೆ ವಶಕ್ಕೆ ಅಂದಾಜು ಮೌಲ್ಯ ರೂ.90 ಕೋಟಿ ಮೌಲ್ಯದ ಆಸ್ತಿಯನ್ನು ಪಡೆಯಲಾಗಿರುತ್ತದೆ. | |

..5

| | | | |
|---|---|---|---|
| | | **ಪಾಲಿಕೆಯ ಆಸ್ತಿಗಳಿಗೆ ಸಂಬಂಧಿಸಿದಂತೆ**<br><br>(ಎ) ಪಶ್ಚಿಮ ವಲಯದಲ್ಲಿ ಪೀರ್ ಬೌಂಡ್ರಿಗೆ ಸಂಬಂಧಿಸಿದಂತೆ ಭಕ್ಷಿ ಗಾರ್ಡನ್ ಪಾಲಿಕೆಯ ಸ್ವತ್ತಿನ ಸಂಖ್ಯೆ:140 ರಲ್ಲಿ. ಸಿ.ಸಿ.ಸಿ 921/2013ರಲ್ಲಿ ಉಚ್ಚ ನ್ಯಾಯಾಲಯದಲ್ಲಿ ಮಾನ್ಯ ನ್ಯಾಯಾಲಯವು ಆದೇಶಿಸಿರುವಂತೆ, ವಾಹನ ನಿಲುಗಡೆಯನ್ನು ನಿಷೇಧಿಸಬಹುದೆಂತಲೂ ಹಾಗೂ ಅರ್ಜಿದಾರರ ಪ್ರಾರ್ಥನಾ ಮತ್ತು ದಫನ್ ಮಾಡುವ ಹಕ್ಕುಗಳಿಗೆ ಅಡ್ಡಿ ಪಡಿಸದಂತೆ ಪಾಲಿಕೆಯ ಆಸ್ತಿಯ ಭಾಗಕ್ಕೆ chain link fencing ಮಾಡಲು ಕ್ರಮ ವಹಿಸಲಾಗುತ್ತಿದೆ.<br><br>(ಬಿ) ಪೂರ್ವ ವಲಯಕ್ಕೆ ಸಂಬಂಧಿಸಿದಂತೆ ಸಹಾಯಕ ಕಂದಾಯ ಅಧಿಕಾರಿ (ವಸಂತನಗರ) ಉಪ ವಿಭಾಗದ ಕಛೇರಿಯ ವ್ಯಾಪ್ತಿಯಲ್ಲಿ ವಸಂತನಗರ, ವಾರ್ಡ್-93 ಪ್ರದೇಶದ ಸರ್ವೆ ನಂ:18 ರಲ್ಲಿನ 3 ಎಕರೆ 29 ಗುಂಟೆ ವಿಸ್ತೀರ್ಣದಲ್ಲಿ ಅನಧಿಕೃತ ದಾಖಲೆಗಳನ್ನು ಸೃಷ್ಟಿಸಿರುವುದು ಕಂಡು ಬಂದ ಕಾರಣ ಈ ಬಗ್ಗೆ ವಿಚಾರಣೆ ನಡೆಸಲು ದಿ:04-07-2014 ರಂದು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್ಐಆರ್‌ನ್ನು ದಾಖಲು ಮಾಡಲಾಗಿದೆ. | |
| 3 | ವಾಪಸ್ ಪಡೆಯಲಾಗಿರುವ ಪ್ರಕರಣಗಳಲ್ಲಿ ಅಕ್ರಮದಾರರುಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು? ವಿವರಗಳನ್ನು ಒದಗಿಸುವುದು. | ಪಾಲಿಕೆಯ ಆಡಳಿತ ಶಾಖೆ, ವಲಯಾಧಿಕಾರಿಗಳು ಹಾಗೂ ಪ್ರಧಾನ ಅಭಿಯಂತರರುಗಳಿಂದ ವರದಿಸಿಕೊಳ್ಳಬೇಕಿರುತ್ತದೆ. | |
| 4 | ವಾಪಸ್ ಪಡೆಯಲಾಗದಿರುವ ಪ್ರಕರಣಗಳೆಷ್ಟು? ಮತ್ತು ವಾಪಸ್ ಪಡೆಯ ಲಾಗದಿರುವುದಕ್ಕೆ ಕಾರಣಗಳೇನು? ವಿವರಗಳನ್ನು ಒದಗಿಸುವುದು. | ಪಾಲಿಕೆಯ ವಲಯಾಧಿಕಾರಿಗಳು ಹಾಗೂ ಪ್ರಧಾನ ಅಭಿಯಂತರರುಗಳಿಂದ ವರದಿಸಿಕೊಳ್ಳಬೇಕಿರುತ್ತದೆ. | |

..6

| | | | |
|---|---|---|---|
| 5 | ಮೇಲ್ಕಂಡ ಅಕ್ರಮಗಳು ನಡೆಯಲು ಕಾರಣಕರ್ತರಾಗಿರುವ ಅಧಿಕಾರಿಗಳು/ ನೌಕರರುಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ ವಿವರಗಳನ್ನು ಒದಗಿಸುವುದು. | ಪಾಲಿಕೆಯ ವಲಯಾಧಿಕಾರಿಗಳು ಹಾಗೂ ಪ್ರಧಾನ ಅಭಿಯಂತರರುಗಳಿಂದ ವರದಿಸಿಕೊಳ್ಳಬೇಕಿರುತ್ತದೆ. | |
| 6 | ಅನಧಿಕೃತ ಕಟ್ಟಡಗಳು/ಬಡಾವಣೆಗಳ ಬಗ್ಗೆ ಸಾರ್ವಜನಿಕರನ್ನು ಎಚ್ಚರಿಸಲು 1/11/1007 ರಿಂದ ಈವರೆಗೂ ಪತ್ರಿಕೆಗಳ ಮೂಲಕ ತಮ್ಮ ಮಹಾನಗರ ಪಾಲಿಕೆ ಕೊಟ್ಟಿರುವ ಪ್ರಕಟಣೆಗಳ ಪ್ರತಿಗಳನ್ನು ಒದಗಿಸುವುದು. | ದಿನಾಂಕ:23-06-2014 ರಂದು ಸಾರ್ವಜನಿಕ ಪ್ರಕಟಣೆಗಳನ್ನು ಪಾಲಿಕೆಯ ಸ್ವತ್ತುಗಳಿಗೆ ಸಂಬಂಧಿಸಿದಂತೆ ಹೊರಡಿಸಲಾಗಿರುತ್ತದೆ<br><br>ಅನಧಿಕೃತ ಕಟ್ಟಡ ಬಡಾವಣೆಗಳ ಬಗ್ಗೆ ಪ್ರಕಟಣೆಗಳು ಪ್ರತಿಗಳನ್ನು ಒದಗಿಸುವ ಕುರಿತು | ಅನುಬಂಧ-3<br><br>ಪಾಲಿಕೆಯ ಕಂದಾಯ ವಿಭಾಗದಿಂದ ಹೆಚ್ಚುವರಿ ನಿರ್ದೇಶಕರು ನಗರ ಯೋಜನೆ ವಿಭಾಗ ವಲಯ, ಮುಖ್ಯ ಅಭಿಯಂತರು ಹಾಗೂ ಸಹಾಯಕ ನಿರ್ದೇಶಕರು ರವರಿಂದ ಪಡೆದು ಕ್ರೂಢೀಕರಿಸಿ ಸಲ್ಲಿಬೇಕಿರುತ್ತದೆ. |
| 7 | ಬಿಬಿಎಂಪಿ ವ್ಯಾಪ್ತಿಯಲ್ಲಿ ಭೂಕಬಳಿಕೆ ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳಲು 1/11/2007 ರಿಂದ ಈವರೆಗೂ ತಮ್ಮ ಮಹಾನಗರ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸಿದ ಆಯುಕ್ತರುಗಳಿಗೆ ತಮ್ಮ ಮಹಾನಗರ ಪಾಲಿಕೆಯ ಮಂಡಳಿ, ಮಹಾಪೌರರು, ಸ್ಥಾಯಿ ಸಮಿತಿಗಳು ಹಾಗೂ ರಾಜ್ಯ ಸರ್ಕಾರ ನೀಡಿರುವ ಲಿಖಿತ ಸೂಚನೆ/ನಿರ್ದೇಶನಗಳ ಪ್ರತಿಗಳನ್ನು ಒದಗಿಸುವುದು. | ದಿನಾಂಕ:29-01-2014 ರಂದು ಪೂಜ್ಯ ಮಹಪೌರರು ಪಾಲಿಕೆಯ ಗುತ್ತಿಗೆಯ ಸ್ವತ್ತುಗಳು ಹಾಗೂ ಆಸ್ತಿಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ನಡವಳಿಯನ್ನು ಲಗತ್ತಿಸಿದೆ<br><br>ಉಳಿದಂತೆ ಪಾಲಿಕೆಯ ಮಹಾಪೌರರ ಕಛೇರಿಯಿಂದ, ಕೌನ್ಸಿಲ್ ಕಾರ್ಯದರ್ಶಿ ಹಾಗೂ ಸಮಿತಿಗಳ ಆಪ್ತ ಕಾರ್ಯದರ್ಶಿ ಕಛೇರಿಯಿಂದ ಪಡೆದು ಸಲ್ಲಿಸಬೇಕಿರುತ್ತದೆ.<br>ರಾಜ್ಯ ಸರ್ಕಾರದ ಸೂಚನೆಗಳಿಗೆ ಸಂಬಂಧಿಸಿದಂತೆ ಕಂದಾಯ ಹಾಗೂ ನಗರಾಭಿವೃದ್ಧಿ ಇಲಾಖೆಗಳಿಂದ ಕಾಲ ಕಾಲಕ್ಕೆ ನೀಡುವ ನಿದೇಶನಗಳಿಗೆ ಮಾಹಿತಿಯನ್ನು ಒದಗಿಸಲಾಗುತ್ತಿರುತ್ತದೆ. | ಅನುಬಂಧ-4<br><br>ಪ್ರತಿಯನ್ನು ಕ್ರೂಢೀಕರಿಸಿ ಸಲ್ಲಿಸಲು ಕಾಲವಕಾಶ ಬೇಕಿರುತ್ತದೆ.<br><br>ಪ್ರತಿಯನ್ನು ಕ್ರೂಢೀಕರಿಸಿ ನೀಡಲು ಕಾಲವಕಾಶ ಬೇಕಿರುತ್ತದೆ. |

| | | | |
|---|---|---|---|
| 8 | ಬಿಬಿಎಂಪಿ ವ್ಯಾಪ್ತಿಯಲ್ಲಿ ವರದಿಯಾಗಿರುವ ಭೂಕಬಳಿಕೆ ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳಲು 1/11/2007 ರಿಂದ ಈವರೆಗೂ ಬಿಬಿಎಂಪಿಯಲ್ಲಿ ಕಾರ್ಯ ನಿರ್ವಹಿಸಿದ ಆಯುಕ್ತರುಗಳು ತಮ್ಮ ಕೆಳಹಂತದ ಅಧಿಕಾರಿಗಳಿಗೆ ನೀಡಿರುವ ಲಿಖಿತ ಸೂಚನೆ/ ನಿರ್ದೇಶನಗಳ ಪ್ರತಿಗಳನ್ನು ಒದಗಿಸುವುದು | ದಿನಾಂಕ:13-05-2011 (ಸುತ್ತೋಲೆ-1, 2 ಮತ್ತು 3) ದಿನಾಂಕ:04-02-2014 ರಂದು ಮಾನ್ಯ ಆಯುಕ್ತರಿಂದ ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ.<br><br>ಉಳಿದಂತೆ ಸೂಚನೆಗಳನ್ನು ಕ್ರೂಢೀಕರಿಸಿ ಸಲ್ಲಿಸಬೇಕಿರುತ್ತದೆ. | ಅನುಬಂಧ-5 |
| 9 | ಬಿಬಿಎಂಪಿ ವ್ಯಾಪ್ತಿಯಲ್ಲಿ ವರದಿಯಾಗಿರುವ ಭೂಕಬಳಿಕೆ ಪ್ರಕರಣಗಳಲ್ಲಿ ಕ್ರಮ ತೆಗೆದುಕೊಂಡಿರುವ ಬಗ್ಗೆ 1/11/2007 ರಿಂದ ಈವರೆಗೂ ಬಿಬಿಎಂಪಿಯಲ್ಲಿ ಕಾರ್ಯ ನಿರ್ವಹಿಸಿದ ಆಯುಕ್ತರುಗಳು, ಮುಖ್ಯ ಕಾರ್ಯದರ್ಶಿಗಳಿಗೆ, ನಗರಾಭಿವೃದ್ಧಿ ಸಚಿವರಿಗೆ ಹಾಗೂ ಮುಖ್ಯ ಮಂತ್ರಿಗಳಿಗೆ ಕೊಟ್ಟಿರುವ ವರದಿಗಳ ಪ್ರತಿಗಳನ್ನು ಒದಗಿಸುವುದು. | ಕ್ರಮ ಸಂಖ್ಯೆ:01ರ ಅನುಬಂಧ 1ರಲ್ಲಿ ಸರ್ಕಾರ ನೀಡಿರುವ ನಿರ್ದೇಶನಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸಲ್ಲಿಸಿರುವ ಮಾಹಿತಿಯನ್ನು ಒದಗಿಸಲಾಗಿರುತ್ತದೆ.<br><br>ರಾಜ್ಯ ಸರ್ಕಾರದ ಸೂಚನೆಗಳಿಗೆ ಸಂಬಂಧಿಸಿದಂತೆ ಕಂದಾಯ ಹಾಗೂ ನಗರಾಭಿವೃದ್ಧಿ ಇಲಾಖೆಗಳಿಂದ ಕಾಲ ಕಾಲಕ್ಕೆ ನೀಡುವ ನಿದೇಶನಗಳಿಗೆ ಮಾಹಿತಿಯನ್ನು ಒದಗಿಸಲಾಗುತ್ತಿರುತ್ತದೆ. | ಅನುಬಂಧ-1<br><br>ಮಾಹಿತಿಯನ್ನು ಕ್ರೂಡಿಕರಿಸಿ ಸಲ್ಲಿಸಲು ಕಾಲವಕಾಶ ಬೇಕಿರುತ್ತದೆ. |
| 10 | ಬಿಬಿಎಂಪಿಯ ಆಸ್ತಿ ವಿವರಗಳನ್ನು ನಿಮ್ಮ ವೆಬ್ ಸೈಟಿನಲ್ಲಿ ಪ್ರಕಟಿಸಲಾಗಿದೆಯೇ? ಈವರೆಗೂ ಪ್ರಕಟಿಸಿಲ್ಲದಿದ್ದರೆ ಕಾರಣಗಳೇನು? ಪ್ರಕಟಿಸಿಲ್ಲದಿದ್ದರೆ ಅತೀ ಶೀಘ್ರದಲ್ಲೇ ಅದನ್ನು ಪ್ರಕಟಿಸಲು ಕ್ರಮಕೈಗೊಳ್ಳುವುದರ ಬಗ್ಗೆ ಯಾವ ಕಾಲಮಿತಿಯಲ್ಲಿ ಮಾಡಲಾಗುವುದೆಂದು ಮಾಹಿತಿ ನೀಡುವುದು. | ಪಾಲಿಕೆಯ ಆಸ್ತಿ- ಉದ್ಯಾನವನ, ಆಟದ ಮೈದಾನ ಮತ್ತು ಖಾಲಿ ಜಾಗಗಳಿಗೆ ಸಂಬಂಧಿದಂತೆ (1688 ಆಸ್ತಿಗಳು) ಪ್ರಾಥಮಿಕ ಅಧಿಸೂಚನೆಯನ್ನು ದಿ:22-11-2012 ರಂದು ಹೊರಡಿಸಲಾಗಿರುತ್ತದೆ.<br><br>ಪಾಲಿಕೆಯಲ್ಲಿ ಘನವೆತ್ತ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ, WP.No:12249-50/2003ರ ಅಡಿಯಲ್ಲಿ ಪಾಲಿಕೆಯ ಸ್ವತ್ತುಗಳ ಸಂರಕ್ಷಣೆ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ, | ಅನುಬಂಧ-6 |

..8

| | | | |
|---|---|---|---|
| | | ಗೌರವಾನ್ವಿತ ನ್ಯಾಯಾಧೀಶರು ಇಂಡೆಕ್ಸಿಂಗ್ ಅಂಡ್ ಸ್ಕ್ಯಾನಿಂಗ್ ಆಫ್ ರೆಕಾರ್ಡ್ಸ್‌ರ ಅಡಿಯಲ್ಲಿ ಕ್ರಮವಿಡಲು ನಿರ್ದೇಶಿಸಿರುವಂತೆ ಬಿಬಿಎಂಪಿಯಲ್ಲಿ ಅ) ಇಂಡೆಕ್ಸಿಂಗ್ ಅಂಡ್ ಸ್ಕ್ಯಾನಿಂಗ್ ಆ) ವರ್ಕ್‌ಫ್ಲೋ ಮ್ಯಾನೇಜ್‌ಮೆಂಟ್ ಹಾಗೂ ಇ) ಅಸೆಟ್ ಮ್ಯಾನೇಜ್‌ಮೆಂಟ್‌ರ ಅಡಿಯಲ್ಲಿ ಆಸ್ತಿಗಳನ್ನು ದಾಖಲಿಸಿ ಕ್ರಮವಿಡಲು ದರ ನಿಗದಿ ಸಮಿತಿಯನ್ನು ಮಾನ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ರಚಿಸಿಕೊಂಡು ಕಿಯೋನಿಕ್ಸ್ ಮುಖಾಂತರ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಪಾಲಿಕೆಯ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯ ಸಲಹೆಗಾರರ ತಾಂತ್ರಿಕ ಅನುಮೋದನೆಯ ಷರತ್ತುಗಳಿಗೆ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯದ ಹಂತದಲ್ಲಿದ್ದು, ಪ್ರಕ್ರಿಯೆ ಜಾರಿಯಲ್ಲಿರುತ್ತದೆ. | |

ಹಾಲಿ ಲಭ್ಯವಿರುವ ಮಾಹಿತಿಯನ್ನು ತಮ್ಮಲ್ಲಿ ಮೇಲ್ಕಂಡಂತೆ ಸಲ್ಲಿಸಲಾಗಿರುತ್ತದೆ.

ಉಳಿದಂತೆ ಕೋರಿರುವ ಪ್ರಶ್ನೆಗಳಲ್ಲಿನ ಮಾಹಿತಿಗಳಿಗೆ ವಲಯಾಧಿಕಾರಿಗಳಿಂದ, ಆಡಳಿತ ಶಾಖೆಯಿಂದ, ಪ್ರಧಾನ ಅಭಿಯಂತರರಿಂದ, ಮುಖ್ಯ ಅಭಿಯಂತರರುಗಳಿಂದ ಬೃಹತ್ ಮಳೆ ನೀರುಗಾಲುವೆ, ಕೆರೆಗಳು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು, ಕೌನ್ಸಿಲ್ ಶಾಖೆಯಿಂದ, ಬಹುಮುಖ್ಯವಾಗಿ ಪಡೆದು ಸಲ್ಲಿಸಬೇಕಿರುವುದರಿಂದ ಈ ಇಲಾಖೆಗಳ ಸಭೆಯನ್ನು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕವನ್ನು ನಿಗಧಿಪಡಿಸಿಕೊಂಡು ಕರೆದು ಮಾಹಿತಿಗಳನ್ನು ಪಡೆದು ಕ್ರೂಢೀಕರಿಸಿಕೊಂಡು ತಮಗೆ ಒದಗಿಸುವುದಾಗಿ ಈ ಮೂಲಕ ತಿಳಿಯಪಡಿಸಿ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಜಂಟಿ ಆಯುಕ್ತರು (ಆಸ್ತಿಗಳು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ